ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು

E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಪೂಶಿಇ/ಸಿಬ್ಬಂದಿ/ಸಿಆರ್-12/ಉ.ಖಾ.ಪೂ.ಸೇ//2017-18 ದಿನಾಂಕ:27-10-2017

# ಜ್ಞಾಪನ

**ವಿಷಯ:** 2011ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಹೆಚ್ಚುವರಿ ಪಟ್ಟಿಯಲ್ಲಿ ನೇಮಕಗೊಂಡ ಉಪನ್ಯಾಸಕರ ಖಾಯಂ ಪೂರ್ವಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

**ಉಲ್ಲೇಖ:**1.ಪಪೂಶಿಇ ಸಿಬ್ಬಂದಿ-2 ನೇಮಕ 153/2010-11 ದಿನಾಂಕ:11-03-2011 ಈ ಕಛೇರಿ ಆಧಿಸುಊಚನೆ ಸಮಸಂಖ್ಯೆ: ದಿನಾಂಕ:05-01-2011, 11-01-2011, ಜ್ಞಾಪನ ದಿನಾಂಕ:14-01-2011, 2-01-2011 ಅಧಿಸೂಚನೆ ದಿನಾಂಕ:28-01-2011, ಮತ್ತು 26-02-2011

2. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಇವರ ಪ್ರಸ್ತಾವನೆ ದಿನಾಂಕ: 08-06-2017

-*-

**ಪ್ರಸ್ತಾವನೆ:**

2011ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಹೆಚ್ಚುವರಿ ಪಟ್ಟಿಯಲ್ಲಿ ನೇಮಕಾತಿ ಹೊಂದಿ, ಉಲ್ಲೇಖ:1ರ ಆದೇಶದಂತೆ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಉಪನ್ಯಾಸಕರು, ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಶಿಫಾರಸ್ಸಿನೊಂದಿಗೆ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರಿನ ಮುಂದೆ ವಿವರಿಸಿದಂತೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಪ್ರಯುಕ್ತ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ನಾಗರಿಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5 (1) (ಎ) ಅನ್ವಯ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿದೆ. ಈ ಮಾಹಿತಿಯನ್ನು ಸಂಬಂಧಪಟ್ಟ ಉಪನ್ಯಾಸಕರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವಂತೆ ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದೆ.

| ಕ್ರ. ಸಂ. | ಹೆಸರು/ ಪದನಾಮ/ ವಿಳಾಸ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಖಾಯಂ ಪೂರ್ವ ಸೇವೆ ಪೂರೈಸಿದ ದಿನಾಂಕ | ಪರಿವೀಕ್ಷಣಾ ಅವಧಿ ತೃಪ್ತಿಕರವೆಂದು ಘೋಷಿಸಿದ ದಿನಾಂಕ (ಬಿ ಎಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ದಿನಾಂಕವನ್ನು ಪರಿಗಣಿಸಿ ಘೋಷಿಸಿದ ದಿನಾಂಕ) |
|---|---|---|---|---|
| 1. | ಶ್ರೀ ಸಂತೋಷ್ ಕನ್ನಡ, ಎ.ಎನ್ ಜೀವಶಾಸ್ತ್ರ ಉಪನ್ಯಾಸಕರು ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈಸೂರು | 10-01-2011 | 17-04-2015 | 18-04-2015 |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:-

1. ಮಹಾಲೇಖಪಾಲರು. (ಎ & ಇ)-ಕರ್ನಾಟಕ, ಪಾರ್ಕ್‌ಹೌಸ್ ಬೆಂಗಳೂರು.
2. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ, ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -- ಇವರಿಗೆ ಅಂತರ್ಜಾಲದಲ್ಲಿ ಅಳವಡಿಸಲು.
4. ಸಂಬಂಧಿಸಿದ ಪ್ರಾಂಶುಪಾಲರುಗಳಿಗೆ <u>ಉಪನ್ಯಾಸಕರುಗಳ ಮೂಲ ಸೇವಾ ಪುಸ್ತಕಗಳೊಂದಿಗೆ</u> ಮುಂದಿನ ಕ್ರಮಕ್ಕಾಗಿ ಹಿಂತಿರುಗಿಸಿದೆ.
5. ಸಂಬಂಧಿಸಿದ ಸಿಬ್ಬಂದಿಗಳಿಗೆ - ಪ್ರಾಂಶುಪಾಲರ ಮೂಲಕ.
6. ಕಛೇರಿ ಪ್ರತಿ.